ಶ್ರೀ ಧರ್ಮಸಿಂಗ್ :- ಮಾನ್ಯ ಉಪಾಧ್ಯಕ್ಷರೆಯವರೇ, ಎಲ್ಲೆಲ್ಲಿ ನನ್ನ ಗಮನಕ್ಕೆ ಬಂದಿದೆಯೋ ಮತ್ತು ಶಾಸಕರು ಹಾಗೂ ಬೇರೆ ಸಂಘ ಸಂಸ್ಥೆಗಳವರ ಪ್ರತಿಭಟನೆ ಮಾಡಿದ್ದಾರೋ ಅಲ್ಲಿ ಈಗಾಗಲೇ ಸ್ಟಾಪ್ ಮಾಡಿದ್ದೇವೆ. ಯಾರೇ ದೊಡ್ಡವರು ಇದ್ದರೂ ಕೂಡ ಮಾಡಿದ್ದೇವೆ. ನೀವು ಚಿಕ್ಕನಾಯಕನ ಹಳ್ಳಿ. ಬಗ್ಗೆ ಪ್ರಸ್ತಾಪ ಮಾಡಿದ್ದೀರಿ ಅದರ ಬಗ್ಗೆಯೂ ಕೂಡ I will take action.

ಶ್ರೀ ಟಿ. ಬಿ. ಜಯಚಂದ್ರ :- ಇದನ್ನು ನಿಲ್ಲಿಸಿಬಿಟ್ಟರೆ ಬಹಳ ದೊಡ್ಡ ಸಹಾಯ ಮಾಡಿದ ಹಾಗೆ ಆಗುತ್ತದೆ. ಬಹಳಷ್ಟು ಹೆಣ್ಣುಮಕ್ಕಳು ನಮ್ಮ ಪರ ಇರುತ್ತಾರೆ.

ಶ್ರೀ ಕೆ.ಹೆಚ್. ಹನುಮೇಗೌಡ :- ಸ್ವಾಮಿ, ಹರಿಜನ ಕಾಲೋನಿ, ಸ್ಕೂಲ್ ಪಕ್ಕ, ದೇವಸ್ಥಾನದ ಪಕ್ಕ ಇರಕೂಡದೆಂದು ಕಾನೂನು ಪ್ರಕಾರ ಇದ್ದರೂ ಕೂಡ ನೂರಾರು ಲೈಸನ್ಸ್‌ಗಳನ್ನು ಕೊಟ್ಟು ಕಾನೂನು ವಿರುದ್ಧವಾಗಿ ಇದು ನಡೆಯುತ್ತದೆಯಲ್ಲ, ಇದು ಸರ್ಕಾರದ ಗಮನಕ್ಕೆ ಬಂದಿಲ್ಲವೆ? ಅಧಿಕಾರಿಗಳ ಗಮನಕ್ಕೆ ಬಂದಿಲ್ಲವೆ? ಅಧಿಕಾರಿಗಳ ಗಮನಕ್ಕೆ ಬಂದಿದ್ದು ಮಿನಿಸ್ಟರ್ ಗಮನಕ್ಕೆ ಬಂದಿಲ್ಲವೆ? ಏಕೆ ಇಂಥಾ ಅನ್ಯಾಯಗಳನ್ನು ಮಾಡುತ್ತೀರಿ? ಕಾನೂನು ಮಾಡುವುದು ನಾವೇ ಕಾನೂನು ಮುರಿಯುವುದು ನಾವೇ, ಪಾಪಕ್ಕೆ ಹುಟ್ಟಿದವರನ್ನು ಸರ್ವನಾಶ ಮಾಡುವುದಕ್ಕೆ ಅವಕಾಶ ಮಾಡುವುದು, ಏನಿದೆಲ್ಲಾ? ಅರ್ಥವಾಗುತ್ತಿಲ್ಲ, ನೀವು ಮಂತ್ರಿಯಾಗಿದ್ದುಕೊಂಡು ಇಂಥಾ ಅನ್ಯಾಯ ನಡೆದರೂ ನೀವು ಏಕೆ ಅಲೋ ಮಾಡುತ್ತೀರಿ? ಎಷ್ಟು ಕಡೆ ನಿಮ್ಮ ಗಮನಕ್ಕೆ ಬಂದಿಲ್ಲ? ಎಷ್ಟು ಜನರ ಮೇಲೆ ಕ್ರಮ ತೆಗೆದುಕೊಂಡಿದ್ದೀರಿ ದಯವಿಟ್ಟು ತಿಳಿಸಬೇಕು. ಇಲ್ಲಾ ಕಾನೂನು ವಜಾ ಮಾಡಿ. ಕಾನೂನು ಮಾಡಿ ಇಟ್ಟಮೇಲೆ ಅದರಂತೆ ನಡೆಯಬೇಕು. ಕಾನೂನು ಮಾಡಿ ಅದರ ಮೇಲೆ ನೀವು ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುವುದಕ್ಕೆ ಅವಕಾಶ ಇಲ್ಲವೇ ಹೋದರೆ ಮಂತ್ರಿಯಾಗಿ ಏಕೆ ಇರಬೇಕು? ಇಲಾಖೆ ಏಕೆ ಇರಬೇಕು? ನಿಮ್ಮ ಅಧಿಕಾರಿಗಳಿಗೆ ಎಲ್ಲಿ ಬೇಕಾದರೂ ಈ ಲೈಸನ್ಸ್‌ನ್ನು ಕೊಟ್ಟುಕೊಳ್ಳಿ ಎಂದು ಹೇಳಿ. ಕಾನೂನು ವಿರುದ್ಧವಾಗಿ ಈ ರೀತಿ ಅತ್ರಮವಾಗಿ ಏನು ಕೊಟ್ಟಿದ್ದಾರೋ ಅವರ ಮೇಲೆ ಏನು ಆಕ್ಷನ್ ತೆಗೆದುಕೊಳ್ಳುತ್ತೀರಿ? ಎಷ್ಟು ದಿನದಲ್ಲಿ ತೆಗೆದುಕೊಳ್ಳುತ್ತೀರಿ? ಎಂಬುದನ್ನು ದಯವಿಟ್ಟು ಅಸೆಂಬ್ಲಿಗೆ ತಿಳಿಸುತ್ತೀರಾ?

ಶ್ರೀ ಧರ್ಮಸಿಂಗ್ :- ಮಾನ್ಯ ಉಪಾಧ್ಯಕ್ಷರೆಯವರೆ, ಸಾಕಷ್ಟು ಸದಸ್ಯರು ಇದರ ಬಗ್ಗೆ ಪ್ರಭಾವ ಬೀರತಕ್ಕಂಥ ಪ್ರಯತ್ನ ಮಾಡಿದ್ದಾರೆ. ಹೈವೇ ಬಗ್ಗೆ, ಟೆಂಪಲ್ಸ್ ಬಗ್ಗೆ, ಎಜುಕೇಷನ್ ಇನ್‌ಸ್ಟಿಟ್ಯೂಷನ್ ಲಂಬಾಣಿ ತಾಂಡ, ಹರಿಜನ ಕೇರಿ ಇಂಥಾ ಕಡೆ ಈ ಅಂಗಡಿಗಳು ಇರುವುದು ಒಂದು ದೊಡ್ಡ ಸಮಸ್ಯೆಯಾಗಿದೆ. ನಾನು ನಮ್ಮ ಅಧಿಕಾರಿಗಳ ಜೊತೆ ಸಮಾಲೋಚನೆ ಮಾಡಿ ಇನ್ನು ಮುಂದೆ ಯಾವ ತರಹ ಕ್ರಮ ತೆಗೆದುಕೊಳ್ಳಲಾಗಿದೆ ಎಂಬ ಬಗ್ಗೆ ಇಲಾಖೆಯ ಡಿಮ್ಯಾಂಡ್ ಬಂದಾಗ ನಾನೂ ಕೂಡ ಸ್ಪಷ್ಟವಾಗಿ ಸರ್ಕಾರದ ನಿಲುವು ಏನು ಎಂದು ಸ್ಪಷ್ಟಪಡಿಸುತ್ತೇನೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಚಿಕ್ಕಮಗಳೂರು ಜಿಲ್ಲಾ ಬಂಧೀಖಾನೆ ಕಟ್ಟಡದ ನಿರ್ಮಾಣ

1296. ಶ್ರೀ ಸಿ. ಆರ್. ಸಗೀರ್ ಅಹ್ಮದ್ (ಚಿಕ್ಕಮಗಳೂರು) :- ಮಾನ್ಯ ಬಂಧೀಖಾನೆ ಮತ್ತು ಗೃಹ ರಕ್ಷಕ ದಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ –

ಅ) ಚಿಕ್ಕಮಗಳೂರು ಜಿಲ್ಲಾ ಬಂಧೀಖಾನೆಯ ನೂತನ ಕಟ್ಟಡ ನಿರ್ಮಾಣ ಕಾರ್ಯ ಪ್ರಾರಂಭವಾಗಿದೆಯೆ? ಆಗದಿದ್ದರೆ ಕಟ್ಟಡ ನಿರ್ಮಾಣಕ್ಕಾಗಿ ಇಲ್ಲಿಯವರೆವಿಗೆ ಸರ್ಕಾರದಿಂದ ಬಿಡುಗಡೆ ಮಾಡಿರುವ ಹಣವೆಷ್ಟು ;

ಆ) ಕಾಮಗಾರಿಯ ಪ್ರಗತಿ ಯಾವ ಹಂತದಲ್ಲಿದೆ ;

ಇ) ಈ ನೂತನ ಕಟ್ಟಡದ ಕಾಮಗಾರಿ ಪೂರೈಸಲು ಬೇಕಾಗುವ ಕಾಲಾವಕಾಶವೆಷ್ಟು? ಇದನ್ನು ತ್ವರಿತವಾಗಿ ಕೈಗೊಳ್ಳುವ ಅಥವಾ ಪೂರೈಸಲು ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಡಿ.ಕೆ. ಶಿವಕುಮಾರ್ (ಬಂಧೀಖಾನೆ ಮತ್ತು ಗೃಹ ರಕ್ಷಕ ದಳ ರಾಜ್ಯ ಸಚಿವರು) –

ಅ) ಹೌದು.

ಆ) ಪ್ರಸ್ತುತ ಕಾಂಪೌಂಡ್ ಗೋಡೆಯ ನಿರ್ಮಾಣವು ನಡೆಯುತ್ತಿರುತ್ತದೆ.

ಇ) ಅನುದಾನ ಪೂರೈಸಿದಂತೆ ಶೀಘ್ರವಾಗಿ ಮುಗಿಸಲಾಗುವುದು.